೭. ಮೈಸೂರು ಜಿಲ್ಲಾ ಸಹಕಾರ ಬ್ಯಾಂಕಿನಲ್ಲಿ ೨೦ ಲಕ್ಷ ರೂಪಾಯಿಗಳ ಅವ್ಯವಹಾರ.

ಶ್ರೀ ಎಂ. ಮಹದೇವ್ (ನಂಜನಗೂಡು).—ಮೈಸೂರು ಜಿಲ್ಲಾ ಸಹಕಾರ ಬ್ಯಾಂಕಿನಲ್ಲಿ ಅವ್ಯವಹಾರ ನಡೆದು ಸುಮಾರು ೨೦ ಲಕ್ಷ ರೂಪಾಯಿ ವಿವಿಧ ಬಾಬುಗಳಲ್ಲಿ ದುರುಪಯೋಗವಾಗಿದೆ. ಆದ್ದರಿಂದ ಸರ್ಕಾರ ಸಿ. ಒ. ಡಿ. ತನಿಖೆ ನಡೆಯಬೇಕು. (ಬ್ಯಾಂಕ್ ಆಫ್ ಅಕೌಂಟ್ಸ್ ಲೆಕ್ಕದಲ್ಲಿ ಸುಮಾರು ೨ ಲಕ್ಷ ಕರೆಂಟ್ ಲೆಕ್ಕದಲ್ಲಿ ವ್ಯತ್ಯಾಸ ೮೧–೮೨ ಕ್ಕೆ ೭,೦೧,೦೦೦–೦೦. ಬಡ್ಡಿ ಕೊಡಬೇಕಾದ ಲೆಕ್ಕದಲ್ಲಿ ಸುಮಾರು ೩ ಲಕ್ಷ. ಬಿಲ್ ಪೇಯಬಲ್ಸ್ ಲೆಕ್ಕದಲ್ಲಿ ಸುಮಾರು ೨,೫೯,೭೨೦–೮೬ ಕಾವೇರಿ ಕೇಡರ್ ಅಥಾರಿಟಿಯವರಿಗೆ ಸರಕಾರ. ಆಪೆಕ್ಸ್ ಬ್ಯಾಂಕಿನವರು ಕೊಟ್ಟಿರುವ ಸುಮಾರು ೧೪ ಲಕ್ಷ ಯಾವ ಲೆಕ್ಕದಲ್ಲೂ ಬಂದಿರುವುದಿಲ್ಲ.) ಸೀನಿಯಾರಿಟಿ ತಪ್ಪಿಸಿ ಮತ್ತು ಪದವೀಧರರನ್ನು ಕಡೆಗಣಿಸಿ ಬಡ್ತಿ ಪಡೆದು ೫ ಗಳಿಗೆ ೫೨೦೦ ರೂಪಾಯಿ ಸಂಬಳ ಪಡೆಯುತ್ತಿರುವ ಜನರಲ್ ಮ್ಯಾನೇಜರ್ ಹುಚ್ಚಪ್ಪನನ್ನು ಬ್ಯಾಂಕಿನ ನಿಯಮಾವಳಿಗಳನ್ನು ವಿಚಾರಿ ನಡೆಯುತ್ತಿರುವುದರಿಂದ ಆತನ ಮೇಲೆ ಕ್ರಮ ತೆಗೆದುಕೊಳ್ಳುವುದು ಮತ್ತು ದುರಾಡಳಿತವಿರುವ ಬ್ಯಾಂಕ್‌ನ ಸೂಪರ್‌ಸೀಡ್ ಮಾಡುವುದು. ೧೯೮೩–೮೪ನೇ ಸಾಲಿನ ವರದಿ ತನಿಖೆ. ೧೯೮೦–೮೧ ನೇ ಜಮಾ ಖರ್ಚು, ಇದರ ಬಗ್ಗೆ ಮಾಹಿತಿಗಳಿವೆ ಇದನ್ನು ತಮ್ಮ ಮುಖಾಂತರ ಸರ್ಕಾರಕ್ಕೆ ಕೊಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ವಾರ್ತಾ, ಪ್ರವಾಸೋದ್ಯಮ ಮತ್ತು ಕೈಗಾರಿಕಾ ಸಚಿವರು).—ಮಾನ್ಯ ಶಾಸಕರು ಮೈಸೂರು ಜಿಲ್ಲಾ ಸಹಕಾರ ಬ್ಯಾಂಕಿನಲ್ಲಿ ನಡೆದಿರುವ ಅವ್ಯವಹಾರದ ಬಗ್ಗೆ ಗಂಭೀರವಾದ ವಿಚಾರವನ್ನು ಎತ್ತಿದ್ದಾರೆ. ಇದನ್ನು ಸಂಬಂಧಪಟ್ಟ ಸನ್ಮಾನ್ಯ ಸಚಿವರ ಗಮನಕ್ಕೆ ತಂದು ಈ ಬಗ್ಗೆ ಕೂಡಲೇ ಏನು ಕ್ರಮ ಕೈಗೊಳ್ಳಬೇಕೋ ಅದಕ್ಕೆ ಕೂಡಲೆ ಕಾರ್ಯಪ್ರವೃತ್ತರಾಗುತ್ತಾರೆಂದು ಹೇಳುತ್ತೇನೆ.

(ಮಾನ್ಯ ಸದಸ್ಯರಾದ ಶ್ರೀಮತಿ ಚಂದ್ರಪ್ರಭ ಅರಸು ಅವರು ಗೈರು ಹಾಜರಾಗಿದ್ದರು)

ಕೊಳ್ಳೇಗಾಲ ಮಹದೇಶ್ವರ ಪ್ರಥಮ ದರ್ಜೆ ಕಾಲೇಜಿಗೆ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಹಣವನ್ನು ಬಿಡುಗಡೆ ಮಾಡುವುದು

ಶ್ರೀ ಜಿ. ರಾಜೂಗೌಡ (ಹನೂರು).—ಮೈಸೂರಿನ ಜಿಲ್ಲೆ ಕೊಳ್ಳೇಗಾಲದಲ್ಲಿ ಮಹದೇಶ್ವರ ಪ್ರಥಮ ದರ್ಜೆ ಕಾಲೇಜನ್ನು ದಿನಾಂಕ ೧–೬–೧೯೬೬ ರಲ್ಲಿ ದಿವಂಗತ ಮಾಜಿ ಶಾಸಕರಾದ ಪೂಜ್ಯ ಜಿ. ವಿ. ಗೌಡರು ಖಾಸಗಿ ಕಾಲೇಜಾಗಿ ಸ್ಥಾಪಿಸಿ ನಂತರ ಸರ್ಕಾರಕ್ಕೆ ವರ್ಗಾವಣೆ ಮಾಡಿದರು. ಕಾಲೇಜನ್ನು ಸ್ಥಾಪಿಸುವಾಗ ಶ್ರೀ ಮಹದೇಶ್ವರ ಸ್ವಾಮಿ ದೇವಸ್ಥಾನದ ಧರ್ಮದರ್ಶಿಗಳು ಪ್ರತಿ ವರ್ಷ ಮಹದೇಶ್ವರ ಕಾಲೇಜಿಗೆ ೨೫ ಸಾವಿರ ರೂಪಾಯಿಗಳನ್ನು ಆದರ ಪೆರೋಭವೃದ್ಧಿಗೆ ಕೊಡುತ್ತೇವೆಂದು ನಿರ್ಣಯ ಮಾಡಿದ್ದಾರೆ. ಇದುವರೆವಿಗೂ ಒಂದು ಕಾಸೂ ಕೊಟ್ಟಿಲ್ಲ ಮುಂದಿನ ವರ್ಷ ೧–೬–೯೬ ರಲ್ಲಿ ಮೇಲ್ಮಂಡ ಕಾಲೇಜನ ಬೆಳ್ಳಿಹಬ್ಬ ಆಚರಿಸಲು ತೀರ್ಮಾನ ಮಾಡಿರುವುದರಿಂದ, ಬೆಳ್ಳಿ ಹಬ್ಬದ ಸಂಕೇತವಾಗಿ ಒಂದು ಸಭಾಭವನ (ಆಡಿಟೋರಿಯಂ) ಒಂದು ಓವರ್ ಹೆಡ್ ಟ್ಯಾಂಕ್, ಕಾಲೇಜು ಮೈದಾನದ ಸುತ್ತ ಮುಳ್ಳಿನ ಬೇಲಿ ಹಾಕಿಸುವುದು, ಮತ್ತು ಪಟ್ಟಣದಿಂದ ಕಾಲೇಜಿನವರೆಗೆ ಟಾರ್ ರಸ್ತೆ ಮೊದಲಾದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮಾಡಬೇಕಾಗಿದ್ದು, ಇದಕ್ಕಾಗಿ ಲಕ್ಷಾಂತರ ರೂಪಾಯಿಗಳನ್ನು ಪಚ್ಚೆ ಮಾಡಬೇಕಾಗಿರುವುದರಿಂದ ಕಂದಾಯ ಮಂತ್ರಿಗಳು ಧಾರ್ಮಿಕ ಮತ್ತು ದತ್ತಿ ಇಲಾಖೆಯ ಕಮೀಷನರ್‌ರವರಿಗೆ ಆದೇಶ ಕೊಟ್ಟು ಮಹದೇಶ್ವರ ಕಾಲೇಜಿಗೆ ಆರು ಕಾಲು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿಸಬೇಕಾಗಿ ವಿನಂತಿ.

SRI AZEEZ SAIT (Minister for Revenue) —Since the institution has already been transferred to Government the question of paying any amount either from the Mahadeshwara Temple or from Revenue Department does not arise. The records do not reveal about the resolution passed by the Temple Committee to contribute Rs. 25,000/- every year. However, if Dharmadarshi Committee of Mahadeshwara Swamy Temple were to pass a resolution to this effect and sent to Government, the same will be examined and appropriate decision will be taken by Government.